■ ವಿಶಾಖ ಎನ್

# ಟಿಕೆಟ್ ದರದ ಏರಿಕೆ, ಇಳಿಕೆಯ ಬಗೆ

'ದೇ ಕಾಲ್ ಹಿಮ್ ಒಜಿ' ತೆಲುಗು ಸಿನಿಮಾ ಈಗ ಸರ್ಕಾರಿ ಆದೇಶದ ಕಾರಣದಿಂದಾಗಿ ಚರ್ಚೆಯಲ್ಲಿದೆ. ಪವನ್ ಕಲ್ಯಾಣ್ ಅಭಿನಯದ ಈ ಸಿನಿಮಾ ಟಿಕೆಟ್ ದರವನ್ನು ಏರಿಕೆ ಮಾಡಲು ಅನುಮತಿ ನೀಡಿ ಸರ್ಕಾರವು ಇತ್ತೀಚೆಗೆ ಆದೇಶ ಹೊರಡಿಸಿದೆ. ಆದೇಶದ ಅನ್ವಯ ಏಕಪರದೆ ಚಿತ್ರಮಂದಿರಗಳಲ್ಲಿ ಟಿಕೆಟ್ ದರವನ್ನು ₹125ಕ್ಕೆ ನಿಗದಿಪಡಿಸಬಹುದು. ಮಲ್ಟಿಪ್ಲೆಕ್ಸ್‌ಗಳಲ್ಲಿ ₹150ರವರೆಗೆ ಅವಕಾಶ. ಸೆಪ್ಟೆಂಬರ್ 25ರಂದು ಚಿತ್ರ ಬಿಡುಗಡೆಯಾಗುವ ದಿನ ನಡುರಾತ್ರಿ 1 ಗಂಟೆಯ ವಿಶೇಷ ಪ್ರದರ್ಶನಕ್ಕೆ ₹1000ದವರೆಗೆ ಟಿಕೆಟ್ ದರ ನಿಗದಿ ಮಾಡಲು ಅವಕಾಶವನ್ನೂ ಸರ್ಕಾರ ದಯಪಾಲಿಸಿದೆ. ಆದರೆ, ದಿನವೊಂದಕ್ಕೆ ಗರಿಷ್ಠ ಐದು ಪ್ರದರ್ಶನಗಳಿಗೆ ಅಷ್ಟೇ ಅವಕಾಶ ಹಾಗೂ ಟಿಕೆಟ್ ದರ ಏರಿಕೆಯ ಅವಧಿ ಹತ್ತು ದಿನಗಳಿಗೆ ಮಾತ್ರ ಅನ್ವಯ ಎನ್ನುವ ಷರತ್ತುಗಳನ್ನು ಕೂಡ ಹಾಕಿದೆ.

ಕರ್ನಾಟಕದಲ್ಲಿ ಸಿನಿಮಾ ಟಿಕೆಟ್ ದರವನ್ನು ₹200ಕ್ಕೆ ಮಿತಿಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ ಕಠಿಣ ನಿರ್ಧಾರವನ್ನೇನೋ ತೆಗೆದುಕೊಂಡರು. ಆದರೆ, ಅದನ್ನು ಪ್ರಶ್ನಿಸಿದ ಅರ್ಜಿಗಳ ವಿಚಾರಣೆ ಹೈಕೋರ್ಟ್ ಮೆಟ್ಟಿಲು ಏರಿದ್ದನ್ನೂ ಕಂಡೆವು. ಆಂಧ್ರಪ್ರದೇಶದಲ್ಲಿ ಹೆಚ್ಚಿಸಿದ ಟಿಕೆಟ್ ದರವೇ ಕರ್ನಾಟಕದಕ್ಕಿಂತ ಇಷ್ಟು ಕಡಿಮೆ ಇದೆಯೇ ಎನ್ನುವ ಪ್ರಶ್ನೆ ಮೂಡದೆ ಇರದು.

ಆಂಧ್ರದಲ್ಲಿ ಏಕಪರದೆಯ ಚಿತ್ರಮಂದಿರಗಳಲ್ಲಿ ಟಿಕೆಟ್ ಸರಾಸರಿ ದರ ₹60–70 ಇದೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಸರಾಸರಿ ₹150. ಬೆಂಗಳೂರಿನಂತಹ ನಗರದಲ್ಲಿ ಈ ಬೆಲೆಗೆ ಟಿಕೆಟ್ ಸಿಗುವುದನ್ನು ಕಲ್ಪಿಸಿಕೊಳ್ಳುವುದೂ ಕಷ್ಟವಾಗಿದೆ.




ಇಷ್ಟು ಕಡಿಮೆ ಬೆಲೆಯಲ್ಲಿ ಸಿನಿಮಾ ಟಿಕೆಟ್ ನೀಡಿದರೂ ತೆಲುಗು ಸಿನಿಮಾಗಳ ಒಟ್ಟಾರೆ ಗಳಿಕೆಯು ಕನ್ನಡದ ಚಿತ್ರಗಳಿಗಿಂತ ಹೆಚ್ಚು ಇರುವುದು ಯಾಕೆ ಎನ್ನುವ ಇನ್ನೊಂದು ಪ್ರಶ್ನೆ ಮೂಡದೇ ಇರದು. ಆ ಗಳಿಕೆಗೆ ಕಾರಣ– ವಿದೇಶಿ ಮಾರುಕಟ್ಟೆ ಹಾಗೂ ಅಂತರರಾಜ್ಯದಲ್ಲಿ ಸಿನಿಮಾಗಳ ವಿತರಣೆಯ ಜಾಲವ ಹಸನಾಗಿ ಹರಡಿರುವುದು. ಕರ್ನಾಟಕದಲ್ಲಿ ಕೂಡ ತೆಲುಗು ಸಿನಿಮಾಗಳನ್ನು ಆಂಧ್ರ ಜನರಿಗಿಂತ ಹೆಚ್ಚಿನ ಟಿಕೆಟ್ ದರ ನೀಡಿ ನೋಡುತ್ತೇವೆ. ವಿದೇಶಿ ಮಾರುಕಟ್ಟೆಯನ್ನು ಎನ್‌ಆರ್‌ಐಗಳು ಪೊರೆಯುತ್ತಿದ್ದಾರೆ. ಬಿಡುಗಡೆಯಾಗುವ ಮೊದಲ ಒಂದು ವಾರ ಯಾವುದೇ ತೆಲುಗು ಸಿನಿಮಾದ ಹಣೆಬರಹವನ್ನು ಬರೆಯುತ್ತದೆ. ಆದರೆ, ಸ್ಥಳೀಯ ಮಾರುಕಟ್ಟೆಯಲ್ಲಿ ಟಿಕೆಟ್ ದರ ಕಡಿಮೆ ಇರುವುದರಿಂದ ದೀರ್ಘಾವಧಿ ಚಿತ್ರಗಳು ನೋಡಲು ದೊರಕುತ್ತವೆ.

ಇನ್ನು ಚಿತ್ರಮಂದಿರಗಳಲ್ಲಿ ಸಿಗುವ ತಿನಿಸುಗಳ ವಿಷಯ. ಅದರಲ್ಲಿ ಆಂಧ್ರಪ್ರದೇಶ ಕೂಡ ಬೆಂಗಳೂರಿನ ಜೊತೆಗೆ ಪೈಪೋಟಿಗೆ ಬಿದ್ದಿದೆ. ಅಲ್ಲಿಯೂ ಬಕೆಟ್ ಪಾಪ್ ಕಾರ್ನ್‌ಗೆ ₹500–600 ತೀಕಬೇಕು.

'ಒಜಿ' ತೆಲುಗು ಸಿನಿಮಾವನ್ನು ಡಿ.ವಿ.ವಿ. ದಾನಯ್ಯ ನಿರ್ಮಿಸಿದ್ದು, ಸುಜೀತ್ ನಿರ್ದೇಶನದ ಮೇಲೆ ಅಪಾರ ನಂಬಿಕೆ ಇಟ್ಟಿದ್ದಾರೆ. ಕೆಲವು ವರ್ಷಗಳ ಹಿಂದೆ ಪ್ರಭಾಸ್ ನಟನೆಯ 'ಸಾಹೋ' ಸಿನಿಮಾವನ್ನು ಇವರೇ ನಿರ್ದೇಶಿಸಿದ್ದರು. ಚಿತ್ರಕ್ಕೆ ಟಿಕೆಟ್ ಏರಿಕೆಯ ಬಿಸಿ ತಟ್ಟುವುದೋ ಅಥವಾ ಅದೇ ಗಳಿಕೆಗೆ ವರದಾನ ಆಗುವುದೋ ಎನ್ನುವುದು ಕೆಲವೇ ದಿನಗಳಲ್ಲಿ ಸ್ಪಷ್ಟವಾಗಲಿದೆ. ■

## ಅಮೀರ್ ಗೆಲುವಿನ ಹೊಸ ಪಥ

ಅಮೀರ್ ಖಾನ್ ತಮ್ಮ ಪ್ರಯೋಗಮುಖಿ ನಿರ್ಧಾರದಿಂದ ಮತ್ತೊಮ್ಮೆ ಗೆಲುವು ಸಾಧಿಸಿದ್ದಾರೆ. ಬಹುತೇಕ ನಿರ್ಮಾಣ ಸಂಸ್ಥೆಗಳು ಒಟಿಟಿ ಹಕ್ಕುಗಳನ್ನು ನೀಡಿ ದೊಡ್ಡ ಮೊತ್ತ ಸಂಪಾದಿಸುವ ಮಾರ್ಗ ಅನುಸರಿಸುತ್ತಿರುವಾಗ ಅಮೀರ್ ತಮ್ಮದೇ ಯೂಟ್ಯೂಬ್ ಚಾನಲ್ ಮೂಲಕ 'ಸಿತಾರೆ ಜಮೀನ್ ಪರ್' ಸಿನಿಮಾ ನೋಡುವ ಅವಕಾಶ ಕಲ್ಪಿಸಿದರು. ಇದಕ್ಕೆ ಕೈಗೆಟುಕುವ ದರವನ್ನು ಇಟ್ಟರು. ಅದರ ಫಲವಾಗಿ ಚಿತ್ರಮಂದಿರಗಳಲ್ಲಿ ಸಿನಿಮಾ ಎಷ್ಟು ಹಣ ಸಂಪಾದಿಸಿಕೊಟ್ಟಿತ್ತೋ, ಅದರ ಇಪ್ಪತ್ತು ಪಟ್ಟು ಮೊತ್ತ ಗಿಟ್ಟಿದೆ. ಇದನ್ನು ಖುದ್ದು ಅಮೀರ್ ಖಾನ್ ಇತ್ತೀಚೆಗೆ ತಿಳಿಸಿದರು.

ಒಟಿಟಿ ವೇದಿಕೆಗಳು ಯಾವ ಮಟ್ಟದಲ್ಲಿ ವಹಿವಾಟು ನಡೆಸುತ್ತಿರಬಹುದು ಎನ್ನುವುದರ ಅಂದಾಜು ಇದರಿಂದ ಗೊತ್ತಾಗುತ್ತದೆ. ಅಷ್ಟೇನೂ ದೊಡ್ಡ ಮೊತ್ತದ ಚಿತ್ರ ಅಲ್ಲದೇ ಇದ್ದರೂ ಅಮೀರ್ ಈ ಸಿನಿಮಾ ಮುಖಾಂತರ ಮಾರುಕಟ್ಟೆಯ ಸಾಧ್ಯತೆಯೊಂದನ್ನು ಸೊರಗಿದ್ದ ಹಿಂದಿ ಚಿತ್ರರಂಗಕ್ಕೆ ತೋರಿಸಿಕೊಟ್ಟಿದ್ದಾರೆ.

ತಮಗೆ ತೋಚಿದ್ದನ್ನೇ ಅಮೀರ್ ಮೊದಲಿನಿಂದ ಮಾಡುತ್ತಾ ಬಂದಿದ್ದಾರೆ. ದಶಕಗಳ ಹಿಂದೆ ಯಶ್ ಚೋಪ್ರಾ ಅವರು 'ಡರ್' ಹಿಂದಿ ಚಿತ್ರದಲ್ಲಿ ಅಭಿನಯಿಸುವಂತೆ ಆಹ್ವಾನಿಸಿದ್ದರು. ಇಬ್ಬರು ಪ್ರಮುಖ ನಟರು ಇರುವ ಸಿನಿಮಾವನ್ನು ಇಬ್ಬರೇ ನಿರ್ದೇಶನ ಮಾಡಬೇಕು ಎನ್ನುವುದು ಆಗ ಅಮೀರ್ ನಿಲುವು ಆಗಿತ್ತು. ಹಾಗಾಗಿ ಆ ಚಿತ್ರದಲ್ಲಿ ಅವರು ಅಭಿನಯಿಸಲಿಲ್ಲ. ಆಶುತೋಷ್ ಗೋವಾರಿಕರ್ 'ಸ್ವದೇಸ್' ಚಿತ್ರದಲ್ಲಿ ನಟಿಸುವಂತೆ ಕರೆದಾಗ, ಆ ಕಥೆಯು ಬೋರಿಂಗ್ ಎಂದು ನಿರಾಕರಿಸಿದ್ದವರೂ ಇದೇ ಅಮೀರ್.

ತಮ್ಮದೇ ಹಾದಿಯಲ್ಲಿ ನಡೆಯುತ್ತಾ ಪ್ರಯೋಗಮುಖಿಯೂ ಆಗಿರುವ ಅವರು ಸದ್ಯಕ್ಕೆ 'ಮಾರ್ಕೆಟ್ ಮ್ಯಾನ್' ಎಂದೇ ಜನಜನಿತರು. ■

